ದಿಃ15.11.2022 OS.No.250/2015 PW-1

ದಿಃ15.11.2022 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ. ಎ ಬಿ ಕೆ ವಕೀಲರಿಂದಃ

ದಾವೆಯನ್ನು ಸಲ್ಲಿಸಲು ನಾನೇ ನಮ್ಮ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ಮೊಳ್ಳೆನಿಂಗೇಗೌಡರಿಗೆ ಮೂರು ಜನ ಮಕ್ಕಳು, ನಿಂಗಮ್ಮ, ಮಾಸ್ತಮ ಮತ್ತು ನಮ್ಮ ತಂದೆ ಮುದ್ದುಲಿಂಗೇಗೌಡರು. ಶಿವಲಿಂಗೇಗೌಡ ಮೊಳ್ಳೆನಿಂಗೇಗೌಡರ ಮಗ ಎಂದರೆ ಸಾಕ್ಷಿ ಹೌದು ಅವರು ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ ಅವರಿಗೆ ಕಾಡಮ್ಮ ಎಂಬುವ ಮತ್ತೊಬ್ಬ ಮಗಳು ಇದ್ದಳು ಎಂದರೆ ನನಗೆ ಗೊತ್ತಿಲ್ಲ. ನಿಂಗಮ್ಮ ಮತ್ತು ಮಾಸ್ತಮ ಮಾಕಳಿ ಗ್ರಾಮದಲ್ಲಿ ವಾಸವಾಗಿದ್ದಾರೆ. ನಿಂಗಮ್ಮ ಸುಮಾರು ವರ್ಷಗಳ ಹಿಂದೆ ಮರಣ ಹೊಂದಿದ್ದಾರೆ. ನಿಂಗಮ್ಮರವರಿಗೆ ಇಬ್ಬರು ಮಕ್ಕಳು ಬಸವಲಿಂಗೇಗೌಡ, ಕೆಂಪರಾಜು ಮತ್ತು ನಾಗಮ್ಮ. ದಾವೆ ಸಲ್ಲಿಸುವುದಕ್ಕೂ ಮೊದಲೇ ಮರಣ ಹೊಂದಿದ್ದಾರೆ. ಪ್ರಸ್ತುತ ದಾವೆಯಲ್ಲಿ ನಿಂಗಮ್ಮ ನ ಮಕ್ಕಳನ್ನಾಗಿ ಮಾಸ್ತಮ್ಮನ ಮಕ್ಕಳನ್ನಾಗಲೀ ಪಕ್ಷಗಾರರನ್ನಾಗಿ ಮಾಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಗೆ ನಾನು ಒಬ್ಬಳೇ ಮಗಳು. 1ನೇ ಪ್ರತಿವಾದಿ ವಾದ ಪತ್ರಕ್ಕೆ ಸಲ್ಲಿಸಿರುವ ತಕಾರಾರಿನ ಬಗ್ಗೆ ತಿಳಿದುಕೊಂಡಿಲ್ಲ. 1ನೇ ಪ್ರತಿವಾದಿಗೆ ಇನ್ನು ನಾಲ್ಕು ಜನ ಮಕ್ಕಳು ಎಂದರೆ ಸುಳ್ಳು. ಪಲ್ಲವಿ, ಕಲ್ಪನ, ಇಂಪನ ಮತ್ತು ಪಂಚಲಿಂಗ ಎಂಬ ಮಕ್ಕಳು ಇದ್ದಾರೆ ಎಂದರೆ ಸುಳ್ಳು ಎಂದು ನುಡಿಯುತ್ತಾರೆ. ನಮ್ಮ ತಾಯಿಯ ತಂದೆ ಊರು ಮಾಕಳಿ ಹೊಸಹಳ್ಳಿ. ನಮ್ಮ ತಾಯಿ ನನ್ನ ಜೊತೆಯಲ್ಲಿ ನನಗೆ ಮದುವೆಯಾದಗಿನಿಂದಲೂ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಅದಕ್ಕೂ ಮೊದಲು ಮಾಕಳಿಯಲ್ಲಿ ವಾಸವಾಗಿದ್ದರು. ಬೆಂಗಳೂರಿಗೆ ಹೋದ ನಂತರ ಆಧಾರ್ ಕಾರ್ಡ್ ಮಾಡಿಸಿಕೊಂಡಿದ್ದೇವೆ ಅದಕ್ಕೂ ಮೊದಲು ಅವರು ಆಧಾರ್ ಕಾರ್ಡ್ ಮಾಡಿಸಿಕೊಂಡಿರಲಿಲ್ಲ. ಅವರು ಚುನಾವಣಾ ಗುರುತಿನ ಚೀಟಿ

ಮಾಕಳಿ ಗ್ರಾಮದಲ್ಲಿ ಇತ್ತು. ಅವರು ಸುಮಾರು 7-8 ವರ್ಷಗಳಿಂದ ಮಾಕಳಿ ಗ್ರಾಮದಲ್ಲಿ ವಾಸವಾಗಿಲ್ಲ. ಪಡಿತರ ಚೀಟಿ ಅವರ ಹೆಸರಿನಲ್ಲಿ ಇಲ್ಲ. 1ನೇ ಪ್ರತಿವಾದಿ ತಕರಾರು ಪತ್ರಸಲ್ಲಿಸಿದ ನಂತರವಾದರೂ 1ನೇ ಪ್ರತಿವಾದಿಗೆ ಮಕ್ಕಳು ಇದ್ದಾರೋ ಇಲ್ಲವೋ ಎಂದು ನಾನು ತಿಳಿದುಕೊಳ್ಳಲಿಲ್ಲ. ದಾವಾ ಸಲ್ಲಿಸುವ ಸಂದರ್ಭದಲ್ಲಿ ವಕೀಲರಿಗೆ 1ನೇ ಪ್ರತಿವಾದಿ ಒಡಹುಟ್ಟಿದವರ ಹೆಸರುಗಳನ್ನು ನೀಡಿದ್ದೇನೆ. ದಾವಾ ಸಲ್ಲಿಸುವ ಸಂದರ್ಭದಲ್ಲಿ ನಿಂಗಮ್ಮ ಮರಣ ಹೊಂದಿರುವ ವಿಚಾರ ಮತ್ತು ಅವರಿಗೆ ಮಕ್ಕಳು ಇರುವ ವಿಚಾರ ತಿಳಿಸಿದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಮಾಸ್ತಮ 1ನೇ ಪ್ರತಿವಾದಿಯವರೊಂದಿಗೆ ವಾಸವಾಗಿದ್ದಾರೆ ಎಂದರೆ ಅವರ ಗಂಡನ ಮನೆಯಲ್ಲಿ ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ಮಾಸ್ತಮ್ಮ ನವರ ಗಂಡನ ಹೆಸರು ಹನುಮಂತಪ್ಪ, ಅವರ ಊರು ಯಾವುದು ಎಂದು ನನಗೆ ಗೊತ್ತಿಲ್ಲ. ಮಾತ್ತಮ್ಮನಿಗೆ ಎಷ್ಟು ಜನ ಮಕ್ಕಳು ಎಂದು ನನಗೆಗೊತ್ತಿಲ್ಲ. ನನಗೆ ಮದುವೆ ಆಗುವುದಕ್ಕೂ ಮೊದಲು ಮಾಕಳಿ ಗ್ರಾಮದಲ್ಲಿ ನಮ್ಮ ತಂದೆಯ ಮನೆಯಲ್ಲಿಯೇ ವಾಸವಾಗಿದ್ದೆ. ನನಗೆ ಮದುವೆ ಆಗುವ ಸಂದರ್ಭದಲ್ಲಿ 28 ವರ್ಷ ವಯಸ್ಸಾಗಿತ್ತು. ನೀವು ಮತದಾನ ಮಾಡುತ್ತಿದ್ದೀರಿ ಎಂದರೆ ನಾನು ಮತದಾನವೇ ಮಾಡಿಲ್ಲ ಎಂದು ನುಡಿಯುತ್ತಾರೆ. ಕುಟುಂಬದ ಪಡಿತರ ಚೀಟಿ ಇತ್ತೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಾನು ನಮ್ಮ ತಂದೆಯ ಮನೆ ಮಾಕಳಿ ಗ್ರಾಮದಲ್ಲಿ ವಾಸವಾಗಿದ್ದೆ ಎಂದು ಹೇಳಿರುವ ಅಂಶಗಳೆಲ್ಲವೂ ಸುಳ್ಳು ಎಂದರೆ ಸರಿಯಲ್ಲ. 1ನೇ ಪ್ರತಿವಾದಿ 2ನೇ ಪ್ರತಿವಾದಿಯನ್ನ ಮದುವೆಯಾದ ಒಂದು ತಿಂಗಳ ನಂತರ ಮಾಕಳಿ ಹೊಸಹಳ್ಳಿ ಗ್ರಾಮಕ್ಕೆ ಹೋಗಿ ವಾಸವಾಗಿದ್ದರೆ ಎಂದರೆ ಸರಿಯಲ್ಲ. ಅವರು ಮಾಕಳಿ ಹೊಸಹಳ್ಳಿ ಗ್ರಾಮಕ್ಕೆ ಹೋದನಂತರ ನ್ಯಾಯಾ ಪಂಚಾಯ್ತಿ ಮಾಡಿಸಿ 2ನೇ ಪ್ರತಿವಾದಿಯನ್ನು 1ನೇ ಪ್ರತಿವಾದಿಯವರ ಮನೆಗೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪುನಃ 2ನೇ ಪ್ರತಿವಾದಿ ವಾಸವಿಲ್ಲದೇ 1ನೇ ಪ್ರತಿವಾದಿಯನ್ನು ನಿರ್ಲಕ್ಷಿಸಿ ತ್ಯಜಿಸಿ ಅವರ ತಂದೆಯ ಮನೆಯಾದ ಮಾಕಳಿ ಹೊಸಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಆ ವೇಳೆಗಾಗಲೇ 1ನೇ

ಪ್ರತಿವಾದಿಯವರ ತಂದೆ ಮೊಳ್ಳೆಲಿಂಗೇಗೌಡ ಮರಣ ಹೊಂದಿದ್ದರು ಎಂದರೆ ಸರಿ. ಮೊಳ್ಳೆಲಿಂಗೇಗೌಡ ರ ಹೆಂಡತಿ ಕೆಂಪಮ್ಮ ಮರಣ ಹೊಂದಿ ಸುಮಾರು *7* ವರ್ಷಗಳು ಆಗಿರಬಹುದು. ಆ ವೇಳೆಗಾಗಲೀ ಮಾಸ್ತಮ್ಮ ಎಂಬುವವರನ್ನು ಮಾಕಳಿ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಲಾಗಿತ್ತು ಎಂದರೆ ಸಾಕ್ಷಿ ವಾಸವಿರುವುದು ಮಾಕಳಿಯಲ್ಲಿಯೇ ಗೊತ್ತು ಆದರೆ ಯಾವ ಗ್ರಾಮದವರಿಗೆ ಕೊಟ್ಟು ವಿವಾಹ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. *2*ನೇ ಪ್ರತಿವಾದಿ *1*ನೇ ಪ್ರತಿವಾದಿಯನ್ನು ನಿರ್ಲಕ್ಷಿ ತ್ಯಜಿಸಿ ಹೋದ ನಂತರ ತನ್ನ ತಾಯಿ ಮತ್ತು ಸಹೋದರರನ್ನು ನೋಡಿಕೊಂಡು *1*ನೇ ಪ್ರತಿವಾದಿಯ ಮನೆಯಲ್ಲಿ ಇದ್ದರು ಎಂದರೆ ಎಲ್ಲರೂ ಜೊತೆಯಲ್ಲಿಯೇ ಇದ್ದರು ಎಂದು ನುಡಿಯುತ್ತಾರೆ. *1*ನೇ ಪ್ರತಿವಾದಿಯನ್ನು *2*ನೇ ಪ್ರತಿವಾದಿ ನಿರ್ಲಕ್ಷಿ ತ್ಯಜಿಸಿ ಹೋದ ಸುಮಾರು ವರ್ಷಗಳ ನಂತರ *1998*ರಲ್ಲಿ ಬೋರಮ್ಮ ಅಲಿಯಾಸ್ ಲಕ್ಷಮ್ಮ ಎಂಬುವವರನ್ನು ಎರಡನೇ ಮದುವೆ ಆಗಿದ್ದಾರೆ ಎಂದರೆ ಸುಳ್ಳು. ಮೇಲೆ ಹೇಳಿದ ಮಕ್ಕಳು ಜನಿಸಿದರು ಎಂದರೆ ಸರಿಯಲ್ಲ. ಪಲ್ಲವಿ, ಕಲ್ಪನಾ ಎಂಬ ಇಬ್ಬರು ಹೆಣ್ಣು ಮಕ್ಕಳಿಗೂ ಮದುವೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕೆಂಪಮ್ಮನವರು ಬದುಕಿದ್ದ ಕಾಲದಲ್ಲಿ ಯಾರ ಯಾರ ಹೆಸರಿಗೆ ಯಾವ ಯಾವ ಸ್ವತ್ತುಗಳನ್ನು ಯಾವ ದಾಖಲಾತಿಯ ಮುಖಾಂತರ ಮಾಡಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಯಾರ ಹೆಸರಿಗೂ ಮಾಡಿಲ್ಲ ಎಂದು ನುಡಿಯುತ್ತಾರೆ. ನಿಂಗಮ್ಮ ಮಾಕಳಿ ಗ್ರಾಮದಲ್ಲಿಯೇ ವಾಸವಾಗಿದ್ದಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.